**ಒಂದನೇ ಅಪರ** ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

ಸಿಸಿ **1368/2024** ಡಿಡಬ್ಲ್ಯೂ - **1**

ಸಾಕ್ಷಿಯ ಹೆಸರು :- ಹೆಚ್ ಆರ್ ನಂದೀಶ

ತಂದೆ/ಗಂಡನ ಹೆಸರು :- ರಾಜು

ವಯಸ್ಸು :- 40 ವರ್ಷ

ಉದ್ಯೋಗ :- ಮೆಡಿಕಲ್ ಸ್ಟೋರ್ ಅಂಗಡಿ

ವಾಸಸ್ಥಳ :- ಹನಕೆರೆ

(ಸಾಕ್ಷಿಗೆ ದಿನಾಂಕಃ 05-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಆರೋಪಿಯ ಪರ ಶ್ರೀ. ಎಸ್ ಯು ರವರಿಂದ ಃ

ನನಗೆ ಪಿರ್ಯಾದಿಯ ಪರಿಚಯ ಇದೆ. ಅವರ ಜೊತೆ ನಾನು ಯಾವುದೇ ವ್ಯವಹಾರ ಮಾಡಿಲ್ಲ. ದಿ 19-04-2023 ರಂದು ನಾನು ಜಮೀನಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಪತ್ರವನ್ನು ಪಿರ್ಯಾದಿಗೆ ಬರೆದುಕೊಟ್ಟಿದ್ದೆ. ಅದರ ಸರ್ವೇ ನಂ.10 ವಿಸ್ತೀರ್ಣ 30 ಗುಂಟೆ ಆಗಿರುತ್ತದೆ. ಸರ್ವೇ ನಂ.7 ರ ವಿಸ್ತೀರ್ಣ 40 ಗುಂಟೆ ಆಗಿರುತ್ತದೆ. ಅವರು ಮುಂಗಡವಾಗಿ ನನಗೆ 7 ಲಕ್ಷ ಹಣವನ್ನು ಕೊಟ್ಟಿದ್ದರು. ಸದರಿ ಹಣವನ್ನು ಮಾಸಿಕ 2 ರೂ ನಂತೆ ಬಡ್ಡಿಗೆ ಕೊಟ್ಟಿದ್ದು, 3 ತಿಂಗಳ ಕಾಲಾವಕಾಶ ಕೊಟ್ಟಿದ್ದರು. ನಾನು 3 ತಿಂಗಳ ಒಳಗೆ ಒಟ್ಟು 7 ಲಕ್ಷದ 40 ಸಾವಿರ ರೂ ಹಣವನ್ನು ವಾಪಸ್ಸು ಮಾಡಿರುತ್ತೇನೆ. ಹಣವನ್ನು ಪಡೆಯುವ ಸಮಯದಲ್ಲಿ ನನ್ನ ಬಳಿ ಸಹಿ ಮಾಡಿದ 4 ಖಾಲಿ ಚೆಕ್ ಗಳನ್ನು ಪಡೆದುಕೊಂಡಿದ್ದರು. ಸದರಿ ಚೆಕ್ ಗಳ ನಂಬರ್ 000042, 000043, 000044, 000045 ಆಗಿರುತ್ತದೆ. 3 ತಿಂಗಳ ನಂತರ ನಾನು ಸಾಲ ಪಡೆದ ಹಣವನ್ನು ವಾಪಸ್ಸು ಮಾಡಿರುತ್ತೇನೆ. ನಾನು ಚೆಕ್ ಗಳನ್ನು ವಾಪಸ್ಸು ಮಾಡುವಂತೆ ಕೇಳಿರುತ್ತೇನೆ. ಅದಕ್ಕೆ ಅವರು ತಂದು ಕೊಡುವುದಾಗಿ ತಿಳಿಸಿದ್ದರು. ನಾನು 4-5 ಬಾರಿ ಪಿರ್ಯಾದಿಯನ್ನು ಕೇಳಿರುತ್ತೇನೆ, ಅವರು ಕೊಡುವುದಾಗಿ ತಿಳಿಸಿದ್ದು ಕೊಟ್ಟಿರುವುದಿಲ್ಲ. ನಂತರ ಜಿ.ಡಿ ರವಿ ಮತ್ತು ಸಿದ್ದಾರ್ಥ ಎಂಬುವವರ ಹೆಸರಿನಲ್ಲಿ ಚೆಕ್ ಪ್ರಕರಣಗಳನ್ನು ದಾಖಲಿಸಿರುತ್ತಾರೆ.

**Prays time for further chief examination.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀ. ಕೆ ಗೋಪಾಲ ಕೃಷ್ಣ.)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು

ಸಾಕ್ಷಿಯ ಸಹಿಃ-